**ಸಾಕ್ಷಿಯನ್ನು ದಿಃ11.02.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನನ್ನ ತಂದೆ ಮರಿಯಪ್ಪ ಹಾಗೂ ನನ್ನ ತಾಯಿ ಚಿನ್ನಮುತ್ತಮ್ಮನಿಗೆ ನನ್ನನ್ನು ಸೇರಿ ಒಟ್ಟು 8 ಜನ ಗಂಡು ಹಾಗೂ ಇಬ್ಬರು ಜನ ಹೆಣ್ಣು ಮಕ್ಕಳು.

2. ಎಸ್.ಎಂ.ಮರಿಯಪ್ಪನವರ ಎಲ್ಲಾ ಮಕ್ಕಳು ಅವರ ಸ್ವಯಾರ್ಜಿತ ಹಾಗೂ ಪಿತ್ರಾರ್ಜಿತ ಸ್ವತ್ತುಗಳನ್ನು ಸಮಾನವಾಗಿ ಹಂಚಿಕೊಂಡು ಅವರವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

3. ವಾದಿಗಳು ಯಾವ ಪರಿಹಾರ ಕೋರಿ ಈ ದಾವೆ ಹಾಕಿದ್ದಾರೆ ಎಂದರೆ, ಜಮೀನು ಅವರದು ಎಂದು ಹಾಕಿದ್ದಾರೆ.

4. 1 ನೇ ವಾದಿ ನಿಮ್ಮ ತಮ್ಮನ ಪತ್ನಿ ಎಂದರೆ ಸರಿ. 2 ರಿಂದ 4 ನೇ ವಾದಿಗಳು ನಿಮ್ಮ ತಮ್ಮನ ಮಕ್ಕಳು ಎಂದರೆ ಸರಿ.

5. ನೀವು 1 ರಿಂದ 3 ನೇ ವಾದಿಗಳ ಮೇಲೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಅ.ದಾ.ನಂ.143/2014 ರಂತೆ ನಿರ್ಬಂಧಕಾಜ್ಞೆ ಆದೇಶ ಕೋರಿ ದಾವೆ ಹಾಕಿದ್ದೀರಿ ಎಂದರೆ, ಸರಿಯಲ್ಲ.

6. ಈ ದಾವಾ ಸ್ವತ್ತಿಗೆ ಸಂಬಂಧಪಡದೇ ವಾದಿಗಳ ಮೇಲೆ ನಿರ್ಬಂಧಕಾಜ್ಞೆ ದಾವೆ ಹಾಕಿದ್ದೀರಾ ಎಂದರೆ, ಸ.ನಂ.88 ಕ್ಕೆ ಹಾಕಿದ್ದೇನೆ. ಸದರಿ ದಾವೆ ಹಾಕಲು ವಕೀಲರಿಗೆ ಮಾಹಿತಿಯನ್ನು ಯಾರು ನೀಡಿದ್ದರು ಎಂದರೆ, ನಾನೇ ಹೇಳಿದ್ದೇನೆ. ಸದರಿ ದಾವೆ ವಜಾ ಆಗಿದೆ ಎಂದರೆ ಸರಿ.

7. ವಾದಿಗಳ ಮೇಲೆ ನೀವು ಅ.ದಾ.ನಂ.367/2016 ರಂತೆ ನಿರ್ಬಂಧಕಾಜ್ಞೆ ದಾವೆ ಹಾಕಿದ್ದೀರಾ ಎಂದರೆ, ಆಸ್ವಾಳು ಜಮೀನಿಗೆ ಹಾಕಿದ್ದೆ. ಸದರಿ ವಾದಪತ್ರ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ದಾವೆ ವಜಾ ಆಗಿದೆ ಎಂದರೆ, ಸರಿಯಲ್ಲ.

8. ನಿಮ್ಮ ಪ್ರತಿವಾದ ಪತ್ರದಲ್ಲಿ ಹೇಳಿದಂತೆ ಮರಿಯಪ್ಪನವರ ಸ್ವತ್ತುಗಳನ್ನು ಹಂಚಿಕೆ ಆಧಾರದ ಮೇಲೆ ಭಾಗ ಮಾಡಿಕೊಂಡಿದೆ ಎಂದು ಹೇಳಲಾದ ಭಾಗ ಯಾವಾಗ ಆಗಿದೆ ಎಂದರೆ, 2016 ರಲ್ಲಿ ಮಾಡಿಕೊಂಡಿದ್ದೇವೆ. ಆ ಬಗ್ಗೆ ದಾಖಲೆ ಇವೆಯಾ ಎಂದರೆ, ವಿಭಾಗ ಪತ್ರ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ, ಹಾಜರುಪಡಿಸಿದ್ದೇನೆ.

9. ವಾದಿಗಳು ಯಾವ ಸರ್ವೇ ನಂಬರ್ ಗೆ ಎಷ್ಟು ವಿಸ್ತೀರ್ಣಕ್ಕೆ ಹಾಕಿದ್ದಾರೆ ಎಂದರೆ, ಸ.ನಂ.24/11 ರಲ್ಲಿ 16 ಗುಂಟೆ, ಸ.ನಂ.26/3 ರಲ್ಲಿ 3 ಗುಂಟೆ ಬರಬೇಕು ಎಂದು ಹಾಕಿದ್ದಾರೆ.

10. ದಾವಾ ಸ್ವತ್ತನ್ನು ನಿಮ್ಮ ತಂದೆ ಯಾವುದಾದರೂ ದಾಖಲಾತಿ ಮೂಲಕ ಬಿಟ್ಟುಕೊಟ್ಟಿದ್ದಾರಾ ಎಂದರೆ, ತಹಶೀಲ್ದಾರ್ ಗೆ ಹೇಳಿಕೆ ಕೊಟ್ಟು ಮಾಡಿಕೊಟ್ಟಿದ್ದಾರೆ. ಆ ರೀತಿ ಯಾವುದೇ ಹೇಳಿಕೆ ಕೊಟ್ಟು ಮಾಡಿಲ್ಲ, ನೀವು ಕಂದಾಯ ಅಧಿಕಾರಿಗಳನ್ನು ಶಾಮೀಲು ಮಾಡಿಕೊಂಡು ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ